ದಯೆಯಿಂದ ಆಗ್ಬೇಕಷ್ಟೆ! ನಾನು ನೆಪವಾಗ್ತೀನಿ. ಕಲ್ಯಾಣದ ಶಿವಶರಣರು ಈ ವಿಷಯದಾಗ ಗೆದ್ದಿದ್ದಾರ ತಮ್ಮ. ಶರಣರು ಲೋಕನಿಷ್ಠುರರು!' ಎಂದು ಹೇಳುತ್ತ ಮೌನ ತಳೆದರು. ಮಠವೂ ಆಗಿದ್ದ ಆ ಒಳ ಮನೆಯಿಂದ ಆದೇಶನಿಗೆ ಕರೆ ಬಂತು. ಎದ್ದು ಹೋದ.

ಶಿವಮಲ್ಲಯ್ಯ ತಾತನಿಗೆ ಕಠಿಣವಾದ ಹೊಸ ಜವಾಬ್ದಾರಿ ಹೆಗಲೇರಿದಂತಾಯ್ತು. ಮನಸ್ಸಿನಲ್ಲಿ ಭಯ ಮೂಡಿದಂತಾದರೂ ಅಲ್ಲೇ ಉಮೇದಿ ಹುಟ್ಟಿತು. 'ಬಸವ, ನಿನ್ನಲ್ಲಿದ್ದ ದಯೇ ಲೋಕದ ಜನರಿಗಿದ್ದಿದ್ದರೆ ಎಲ್ಲ ಹಳ್ಳಿಗಳೂ ಕಲ್ಯಾಣಗಳೇ ಆಗುತ್ತಿದ್ದವು' ಎಂದುಕೊಂಡ. ನಿರಾಶೆಯಾದರೂ ಮೈಮನಸ್ಸಿಗೆ ಆವೇಶದ ಬಿಸಿ ತಗುಲಿದಂತಾಯಿತು. ಮುಂದಿನ ದಾರಿ ಸರಳವಂತೂ ಇರದಿದ್ದರೂ ಹುಡುಕಲು ನಿರ್ಧರಿಸಿದ.

ಪ್ರಸಾದ ಪಡೆದು ಆದೇಶ ಬಂದು ತಾತನ ಮುಂದೆ ಕುಳಿತು, 'ನಾನು ಬರ್ತೀನಿ ತಾತ. ಕೈ ಬಿಡಬ್ಯಾಡ ನನ್ನ' ಎಂದ. ಆದೀಶನಲ್ಲಿ ಹುಸಿತನ ಕಾಣಿಸಲಿಲ್ಲ ತಾತನಿಗೆ.

'ಆದೀಶ, ನೀನು ನನಗೇನೂ ವಚನ ಕೊಡಬ್ಯಾಡ! ನಾನು ಕೇಳುವಾತನೂ ಅಲ್ಲ. ಆದ್ರೆ ವಿಶ್ವಾಸ ಉಳಿಸಿಕೊಂಡು ನಿಲ್ಲು. ಶಿವಗೀತಮ್ಮನನ್ನು ಮದುವೆಯಾಗುವ ವಿಚಾರದಿಂದ ಹಿಂದಕ ಬರಬ್ಯಾಡ. ನೀನು ಅಚಲನಾಗಿ ಉಳುದ್ರ ನಾನೇ ನಿನ್ನ ಋಣಿ' ಎಂದು ಹೇಳಿ, 'ನಿನ್ನ ದಿಟದ ನಿರ್ಧಾರವನ್ನು ಮೊದ್ಲು ಆವೇಶ ಇಲ್ಲದಂಗ ನಿಮ್ಮ ಮನೆಮಂದಿಗೆ ಅಪ್ಪನಿಗೆ ತಿಳಿಸು. ಎರಡನೇದ್ದು ಶಿವಸಂಗಪ್ಪ ಯಜಮಾನನಿಗೆ ಹೋಗಿ ಹೇಳು. ಶಿವಗೀತಮ್ಮ ಒಪ್ಪಿದ್ದಾಳಂತ ನೀನು ಹೇಳ್ತಿದ್ದಿ, ಸರಿ. ನೀನು ಅವರಿಬ್ಬರಲ್ಲಿ ವಿಷಯ ತಿಳಿಸಿದ ಮ್ಯಾಲೆ ನಾನು ಅವರಿಬ್ಬರ ಜತೆ ಮಾತಾಡಿ ಒಪ್ಪಿಸಲು ಸಕಲ ಪ್ರಯತ್ನ ಮಾಡ್ತೀನಿ' ಎಂದು ಹೇಳಿದ ತಾತ, ಆದೀಶನಿಗಾಗಿ ಬಂಡಿ ಕಟ್ಟಿಸಿ, ಬಂಡಿಯಲ್ಲೇ ಕೂಡಿಸಿ ಕಳಿಸಿದ...

'ತಾತ, ಅಪ್ಪ, ಆದೀಶ ನಾಷ್ಟಾ ಮಾಡಿದ. ಆರಾಮಾಗಿ ಮಾತಾಡಿಕೊಂಡು ಕುಂತಾನ. ಹೆದರಿಕೊಂಡಂಗೇನೂ ಕಾಣದಿಲ್ಲ' ಶಿವಸಂಗಪ್ಪನ ಹಿರಿಮಗ ಶಿವಬಸವ ಬಂದು ಹೇಳಿದ.

'ನಮ್ಮ ಮನೆಮಂದಿ ಜತೆ ಮಾತಾಡಿಕೊಂಡು ಖುಷಿಯಿಂದ ಇದ್ದಾನ. ಮುಂದೇನಂತ...?' ಇನ್ನೊಬ್ಬ ಮಗ ಶಿವಸಿದ್ಧರಾಮನೂ ಬಂದು ಕೇಳಿದ.

'ಆದೀಶನನ್ನ ವಾಣ್ಣಾಗಿ ನೋಡ್ಕಳ್ರಿ. ಶಿವಗೀತನ ಜತೆ ಮಾತಾಡ್ಲಿ' ಶಿವಸಂಗಪ್ಪ ಹೇಳಿದ.

'ಊರ ಹಿರಿಯರು ಬೀಗ್ರು ಬರ್ಲಿಲ್ಲ. ಹುಡ್ಗ ಮಾತ್ರ ಬಂದು ಕುಂತಾನ. ನಾವೇ ಹೋಗಿ ಏನಂಬದು ವಿಚಾರಿಸಿ ಬರಣು ಅಂತಿದ್ದಾರ'

'ಶಿವ, ಆದೀಶನನ್ನ ಮಲ್ಲಪ್ಪನೇ ಕಳಿಸ್ಯಾನಂತ ಹೇಳ್ಯಾನ. ಹಂಗಾಗಿ ಬರ್ತಾರ. ಸಂಕಷ್ಟ ಎದುರಾಗ್ಯಾದ. ಬಗೆಹರಿಸಿಕೊಂಡು ಬರ್ತಾರ. ನಮ್ಗ ಮುಹೂರ್ತಯಿಲ್ಲ. ಮರ್ತದಂಬ ಚಿಂತಿಯಿಲ್ಲ. ಬೀಗ್ರು ಬಂದಾಗ ಮದುವೆ ನಡೆದರೆ ಅದೇ ಶುಭ ಮುಹೂರ್ತ. ಬಸವತತ್ತ್ವ ಇದು'' ಎಂದು ತಾತ ಹೇಳಿದಾಗ 'ಆಯ್ತು ತಾತ. ಉಂಬುವ ಹೊತ್ತಾದ್ರ ಮಂದಿನ್ನ ಪ್ರಸಾದಕ್ಕ ಕರಿತೀವಿ. ಉಂಡು ಕುಂದ್ರುತಾರ' ಎಂದು ಹೇಳುತ್ತ ಅಣ್ಣ-ತಮ್ಮ ಹೋದರು.

'ತಾತ, ಈ ಹುಡುಗನ ಮಾತು ಕೇಳಿ ನಾವಿಬ್ಬರು ಕಷ್ಟ ಹೊತಗೊಂಡಂಗಾಯ್ತು...' ಶಿವಸಂಗಪ್ಪ ಸೋತ ದನಿಯಲ್ಲಿ ಅಂದ.

'ಶಿವಸಂಗಪ್ಪ, ಆದೀಶ ಬರುವ ಮುಂಚೆ ನಾವೆಲ್ಲರೂ ಉಮೇದಿಯಿಂದನೇ ಇದ್ದೆವು. ಮಲ್ಲಪ್ಪನ ಮಗ್ನು ತಕರಾರು ತಕ್ಕಂಡು ತಡೆ ಹಿಡದಾಳಂತ ಗೊತ್ತಾಯ್ತು. ಬಗೆಹರಿಸಿಕೊಂಡು ಬೀಗ್ರ ಬರ್ತಾರಂತ ನನಗನಸ್ತದ. ಎಲ್ಲ ಒಳಿತಾಗಲಿದೆ ನೋಡನು' ಎಂದು ತಾತ ಹೇಳಿ ಸುಮ್ಮನೆ ಕುಂತ. ಶಿವಮಲ್ಲಯ್ಯ ತಾತನಿಗೆ ಅನುಮಾನವಿರಲಿಲ್ಲ. ಈ ವಿಷಯದಾಗ ಅವಸರ ಮಾಡಿ ನಿರ್ಧಾರಕ್ಕ ಬಂದಿಲ್ಲ. ಎಲ್ಲರೂ ಒಮ್ಮತಕ್ಕ ಬಂದ ಮ್ಯಾಲೇನೇ ಮದುವೆ ಕಾರ್ಯಕ್ಕೆ ತಯಾರಿ ಮಾಡಿಕೊಂಡದ್ದು ಎಂಬ ವಿಶ್ವಾಸ ತಾತನಿಗೆ ಇತ್ತು.

* * *

ಶಿವಮಲ್ಲಯ್ಯ ತಾತನಲ್ಲಿಗೆ ಆದೀಶ ಬಂದು ಹೋಗಿ ಒಂದು ತಿಂಗಳಾಗಿತ್ತು. ಬಸವಪುರದ ಮಲ್ಲಿಕಾರ್ಜುನಪ್ಪ ಸಿದ್ರಾಮಪುರದ ತಾತನ ಮನೆಗೆ ಬಂಡಿ ಕಟ್ಟಿಸಿಕೊಂಡು ಬಂದ. ತಾತನ ಪಾದಕ್ಕೆ ಬಗ್ಗಿ ಶಣ ಮಾಡಿ ಜಮಖಾನದ ಮ್ಯಾಲೆ ಕುಂತ. ಅಂದಕಂಡು ತಾತನಿಗೆ ತಕ್ಷಣ ಅರಿವಿಗೆ ಬಂತು ಮಗ ಆದೀಶ ಅಪ್ಪನ ಮುಂದೆ ವಿಷಯ ತಿಳಿಸಿರಬೇಕೆಂದು. ತಾತ ಉಪಚರಿಸಿ, 'ಹೇಳಿ ಕಳಿಸಿದ್ರೆ ನಾನೇ ಬರ್ತಿದ್ದೆ' ಎಂದು ಹೇಳುತ್ತ 'ಬೇಶದಿರಿಲ್ಲ?' ಎಂದು ಕೇಳಿದ. ಬಿಳಿಅಂಗಿ, ಬಿಳಿಪಂಚೆ ತೊಟ್ಟಿದ್ದ ಮಲ್ಲಿಕಾರ್ಜುನಪ್ಪನ ಹಣೆ ಮ್ಯಾಲೆ ಮೂರು ಬೆರಳಿನಿಂದ



